| | |
|---|---|
| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
| ಸಿ.ಸಿ.ನಂ.**9/2023** | |
| | ಚಾಸಾ-**4** |
| | ಪ್ರಾಸಾ-**2** |
| ಸಾಕ್ಷಿದಾರರ ಹೆಸರು | ಬಸವರಾಜ ಕೊಳ್ಳಣ್ಣವರ |
| ತಂದೆ/ಗಂಡ/ತಾಯಿ ಹೆಸರು | ಕಲ್ಲಪ್ಪ |
| ವಯಸ್ಸು | **28** ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮದರಖಂಡಿ |

ಸಾಕ್ಷಿಯನ್ನು ದಿನಾಂಕಃ**-25-02-2025**ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-

ಚಾಸಾ-1 ನನ್ನ ಚಿಕ್ಕಮ್ಮ. ಚಾಸಾ-5 ನನ್ನ ಚಿಕ್ಕಪ್ಪ. ಚಾಸಾ-6 ರಿಂದ 8 ರವರು ನನ್ನ ಸಂಬಂಧಿಕರು. 4ನೇ ಆರೋಪಿ ನನ್ನ ತಾಯಿಯಾಗಬೇಕು. ನಾವು ಮುಂಚೆ ಚಿಮ್ಮಡ ಗ್ರಾಮದಲ್ಲಿ ನಮ್ಮ ಅಜ್ಜ, ನಮ್ಮ ತಂದೆ-ತಾಯಿ ವಾಸವಾಗಿದ್ದೆವು. ನಂತರ ನಮ್ಮ ತಂದೆ ಮೃತಪಟ್ಟಿದ್ದಾರೆ. ನಮ್ಮ ತಂದೆ ಮೃತಪಟ್ಟ ನಂತರ ನಮ್ಮ ಅಜ್ಜ ಚಿಮ್ಮಡ ಗ್ರಾಮದ ಜಮೀನನ್ನು ಮಾರಾಟ ಮಾಡಿ, ಮದರಖಂಡಿ ಗ್ರಾಮದಲ್ಲಿ ಜಮೀನನ್ನು ತೆಗೆದುಕೊಂಡಿದ್ದಾರೆ. ನಾವು ಮದರಖಂಡಿ ದೊಡ್ಡ ಕೆನಾಲ ಹತ್ತಿರ ಇರುವ ಜಮೀನಿನಲ್ಲಿ ವಾಸವಾಗಿದ್ದೆವು. ನಾನು, ನಮ್ಮ ಚಿಕ್ಕಪ್ಪನೊಂದಿಗೆ ಮದರಖಂಡಿಯಲ್ಲಿ ವಾಸವಾಗಿದ್ದೆವು. 4ನೇ ಆರೋಪಿ ತನ್ನ ತವರು ಊರು ತೇರದಾಳದಲ್ಲಿ ವಾಸವಾಗಿದ್ದರು. ನಾನು ಮತ್ತು ನನ್ನ ತಮ್ಮ ಮದರಖಂಡಿಯಲ್ಲಿ ವಾಸವಾಗಿದ್ದೆವು. 4ನೇ ಆರೋಪಿ ನಮ್ಮನ್ನು ನೋಡಲು ತಿಂಗಳು ಅಥವಾ ಎರಡು ತಿಂಗಳಿಗೊಮ್ಮೆ ಬಂದು ಹೋಗುತ್ತಿದ್ದರು. 4ನೇ ಆರೋಪಿಯೊಂದಿಗೆ ಒಬ್ಬರು ಅಪರಿಚಿತ ವ್ಯಕ್ತಿ ಬರುತ್ತಿದ್ದರು. 4ನೇ ಆರೋಪಿ ಆ ರೀತಿ ಬಂದಾಗ ಸದರಿ ವ್ಯಕ್ತಿಯೊಂದಿಗೆ ಮದರಖಂಡಿಯಲ್ಲೇ 2-3 ದಿನ ವಾಸ ಮಾಡಲು ಪ್ರಾರಂಭಿಸಿದ್ದಳು. ಸದರಿ ವ್ಯಕ್ತಿ ಅಪರಿಚಿತ ವ್ಯಕ್ತಿಯಾಗಿದ್ದರಿಂದ ಆತನ ಹೆಸರನ್ನು ನಾವು ಕೇಳಿದ್ದೇವೆ. ಆತ ತನ್ನ ಹೆಸರು ಅಜಿತ್ ವಸಂತ ಬರಡಗಿ ಎಂದು ಹೇಳಿದ್ದಾರೆ. ಯಾಕೆ ಬರುತ್ತೀಯಾ ಎಂದು ಕೇಳಿದಾಗ, ಸದರಿಯವರು ವ್ಯವಹಾರ ಇದೆ ಎಂದು ಹೇಳಿದ್ದಾರೆ. 3-4 ಬಾರಿ ಆ ವ್ಯಕ್ತಿ 4ನೇ ಆರೋಪಿಯೊಂದಿಗೆ ಬಂದಾಗ ನಾವು ಸದರಿ ವಿಷಯವನ್ನು ನಮ್ಮ ಊರಿನ ಹಿರಿಯರಿಗೆ ಹೇಳಿದ್ದೇವೆ. ಚಾಸಾ-11 ರಿಂದ ಚಾಸಾ-13 ರವರು ಬಂದು ಈ ರೀತಿ ಯಾಕೆ ಎಂದು ಕೇಳಿದ್ದಾರೆ. ಆ ಸಮಯದಲ್ಲಿ ಚಾಸಾ-1, ಚಾಸಾ-5 ರಿಂದ 8 ರವರು ಇದ್ದೆವು. ನಾವು ಆ ರೀತಿ ಬಂದಾಗ ಅವರನ್ನು ಮರಳಿ ಕಳಿಸಿದ್ದರಿಂದ ಅವರಿಗೆ ನಮ್ಮ ಮೇಲೆ ಸಿಟ್ಟು ಇತ್ತು. ನಂತರ 1, 3 ಮತ್ತು 4ನೇ ಆರೋಪಿತರು ಮದರಖಂಡಿಯಲ್ಲಿ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದರು.

ದಿನಾಂಕ 02-10-2022 ರಂದು ನಾವು ಮುಂಜಾನೆ 9 ಗಂಟೆಗೆ ಮನೆಯಲ್ಲಿ ಇದ್ದೆವು. ಆ ಸಮಯದಲ್ಲಿ ಗಲಾಟೆ ಶಬ್ದ ಕೇಳಿ ಮನೆಯಿಂದ ಹೊರಗೆ ಬಂದಿದ್ದೇವೆ. ಆಗ ಚಾಸಾ-1 ದನಗಳಿಗೆ ಮೇವು ಹಾಕುತ್ತಿದ್ದಳು. ಆಗ 1ನೇ ಆರೋಪಿ ಹಿಂದಿನಿಂದ ಬಂದು ಚಾಸಾ-1ರವರನ್ನು ಹಿಡಿದುಕೊಂಡಿದ್ದರು. ನಿಮ್ಮ ಅಕ್ಕನನ್ನು ನೋಡಿಕೊಂಡ ಹಾಗೆ ನಿನ್ನನ್ನು ನೋಡಿಕೊಳ್ಳುತ್ತೇನೆ ಎಂದು ಚಾಸಾ-1ರವರಿಗೆ ಹೇಳುತ್ತಿದ್ದ ಮತ್ತು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದನು. 2 ರಿಂದ 4ನೇ ಆರೋಪಿತರು ಸಹ ಚಾಸಾ-1 ರವರಿಗೆ ಜಗ್ಗಾಡಿ ಬೈಯುವುದು ಮಾಡುತ್ತಿದ್ದರು. ಆಗ ನಾನು ಬಂದು ಗಲಾಟೆಯನ್ನು ಬಿಡಿಸಿದ್ದೇನೆ. ನಂತರ ವಿಷಯವನ್ನು ಹಿರಿಯರಿಗೆ ಹೇಳಿದ್ದೇನೆ. ಚಾಸಾ-1 ರವರಿಗೆ ಸ್ವಲ್ಪ ಗಾಯಗಳಾಗಿದ್ದರಿಂದ ಮನೆಯಲ್ಲಿ ಚಿಕಿತ್ಸೆ ಕೊಡಿಸಿದ್ದೇವೆ. ನಂತರ ಹಿರಿಯರೊಂದಿಗೆ ವಿಚಾರಿಸಿ ಅವರೊಂದಿಗೆ ಗಲಾಟೆ ಮಾಡುವುದು ಬೇಡಾ ಎಂದು ತಿಳಿದು ಪ್ರಥಮ ವರ್ತಮಾನ ಹೇಳಿಕೆ ಕೊಟ್ಟಿದ್ದೇವೆ. ಪ್ರಥಮ ವರ್ತಮಾನ ಹೇಳಿಕೆಯನ್ನು ನಾನು ಚಾಸಾ-1 ರವರು ಹೇಳಿದಂತೆ ಬರೆದು ನಾನು ಸಹಿ ಹಾಕಿದ್ದೇನೆ. ಪ್ರಥಮ ವರ್ತಮಾನ ಹೇಳಿಕೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿತರೇ ಆ ದಿನ ಗಲಾಟೆ ಮಾಡಿದ್ದರು.

<u>ಪಾಟೀ ಸವಾಲುः **3** ಮತ್ತು **4**ನೇ ಆರೋಪಿತರ ಪರ ವಕೀಲರಿಂದः**-**</u>

ನಮ್ಮ ತಂದೆ ಮೃತಪಟ್ಟ ನಂತರ 4ನೇ ಆರೋಪಿ ನನ್ನನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಚಾಸಾ-1 ರೊಂದಿಗೆ ಸುಮಾರು 18 ವರ್ಷಗಳಿಂದ ವಾಸವಾಗಿದ್ದೇನೆ. 4ನೇ ಆರೋಪಿ ನಮ್ಮ ದೊಡ್ಡಪ್ಪನ ವಿರುದ್ಧ ಓ ಎಸ್ ನಂ.89/2007 ರಂತೆ ಪಾಲು ಕೇಳಿ ದಾವೆ ಹಾಕಿದ್ದಳು ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಸಹ ವಾದಿಯಾಗಿದ್ದೆ ಎಂದರೆ ಸರಿ. 4ನೇ ಆರೋಪಿ ಮತ್ತು ನಾವು ಸೇರಿ ಸದಾಶಿವ ಕೊಳ್ಳನ್ನವರ, ಚಂದ್ರವ್ವ ಕೊಳ್ಳನ್ನವರ ಇವರ ವಿರುದ್ಧ ಸದರಿ ದಾವೆಯನ್ನು ಹಾಕಿದ್ದೆವು ಎಂದರೆ ಸರಿ. ಚಾಸಾ-1 ಇವಳಿಗೆ ಸೊನ್ನವ್ವಾ ಅಲಿಯಾಸ ಸುನಂದಾ ಎಂದು ಕರೆಯುತ್ತಾರೆ ಎಂದರೆ ಸರಿ. ಓ ಎಸ್ ನಂ.89/2007 ರಲ್ಲಿ ಚಾಸಾ-1, 7ನೇ ವಾದಿಯಾಗಿದ್ದಳು ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ತಾಯಿ ಸಾಕ್ಷಿ ಹೇಳಿ ತಾನಾಗಿಯೇ ಮುಂದೆ ನಿಂತು ಕೇಸು ನಡೆಸಿದ್ದಳು ಎಂದರೆ ಸರಿ. ಆ ಸಮಯದಲ್ಲಿ ನಾನು ನಮ್ಮ ತಾಯಿಯೊಂದಿಗೆ ವಾಸವಾಗಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನಮ್ಮ ತಾಯಿಯೊಂದಿಗೆ ವಾಸವಾಗಿದ್ದು, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4ನೇ ಆರೋಪಿ ಕಬ್ಜಾ ಸಲುವಾಗಿ ಎಫ್ ಡಿ ಪಿ ನಂ.3/2023 ನ್ನು ಹಾಕಿದ್ದಳು ಎಂದರೆ ಸರಿ. ಆಗಲೂ ಸಹ ನಾನು 4ನೇ

ಆರೋಪಿಯೊಂದಿಗೆ ವಾಸವಾಗಿದ್ದೆ ಎಂದರೆ ಸರಿಯಲ್ಲ. ಸದರಿ ಕೇಸಿನಲ್ಲಿ ತಲಾ 30 ಗುಂಟೆ ಜಮೀನು ಭಾಗಕ್ಕೆ ಬಂದಿತ್ತು ಎಂದರೆ ಸರಿ. ಆಗ 4ನೇ ಆರೋಪಿ 30 ಗುಂಟೆ ಜಮೀನಿನಲ್ಲಿ ಅದನ್ನು ಅಭಿವೃದ್ಧಿಪಡಿಸಿ ವ್ಯವಸಾಯ ಮಾಡುತ್ತಿದ್ದಳು ಎಂದರೆ ಸರಿಯಲ್ಲ. 2017 ರಲ್ಲಿ ನಮ್ಮ ತಾಯಿ ತಾವು ಬಡವರಿದ್ದು, ಮನೆ ಕಟ್ಟಿಕೊಳ್ಳಲು ಅನುದಾನ ಮಂಜೂರಾತಿ ಕೇಳಿದ್ದರಿಂದ ರೂ.1,80,000/- ಗಳು ಮಂಜೂರಾಗಿ ಮನೆ ಕಟ್ಟಿದ್ದರು ಎಂದರೆ ಸರಿ. ಸರಕಾರದವರು ಜಾಗೆಯನ್ನು ಮತ್ತು ಮನೆಯನ್ನು ಕಟ್ಟಿಕೊಳ್ಳಲು ಅವರ ಹೆಸರಿಗೆ ಮಂಜೂರು ಮಾಡಿದ್ದರು ಎಂದರೆ ಸರಿ. 4ನೇ ಆರೋಪಿ ಮನೆ ಕಟ್ಟಿದ ನಂತರ ಬೇರೆಯವರ ಜಮೀನುಗಳಲ್ಲಿ ಲಾವಣಿ ಆಧಾರದ ಮೇಲೆ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 3 ಮತ್ತು 4ನೇ ಆರೋಪಿತರು ಮನೆ ಕಟ್ಟಿಕೊಂಡು ಜೀವನ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಈಗಲೂ ಸಹ ಸರಕಾರದಿಂದ ಮಂಜೂರಾದ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

ನಾನು ಚಾಸಾ-1ರೊಂದಿಗೆ ಜಮೀನಿನಲ್ಲಿ ವಾಸವಾಗಿದ್ದೇನೆ. ಚಾಸಾ-1 ಇವರ ಹೆಸರಿಗೆ 30 ಗುಂಟೆ ಜಮೀನಿಗೆ ಪಹಣಿ ಆಗಿದೆ ಎಂದರೆ ಸರಿಯಲ್ಲ. 2017 ರಲ್ಲಿ ಅವರವರ ಹೆಸರಿಗೆ ಪಹಣಿಗಳು ಆಗಿವೆ ಎಂದರೆ ಸರಿಯಲ್ಲ. ಘಟನೆ ನಡೆದಿದೆ ಎಂದು ಹೇಳಲಾದ ದಿನಾಂಕದಂದು ನಾನು ಚಾಸಾ-1 ರವರ ಮನೆಯಲ್ಲೇ ಇದ್ದೆ. ಚಾಸಾ-1 ರವರನ್ನು ಎಳೆದಾಡಿದ್ದಾರೆ ಎಂದು ಹೇಳಲಾದ ಸಮಯದಲ್ಲಿ ಅವರ ಸೀರೆ ಹರಿದಿರಲಿಲ್ಲ. ಘಟನೆಯಾದ ತಕ್ಷಣ ನಾನು ಠಾಣೆಗೆ ಹೋಗಿ ಪ್ರಥಮ ವರ್ತಮಾನ ಹೇಳಿಕೆ ಕೊಟ್ಟಿಲ್ಲ. ಈ ಘಟನೆ ಆಗಿದೆ ಎಂದು ಹೇಳಲಾದ ದಿನಾಂಕಕ್ಕಿಂತ ಮುಂಚೆ 4ನೇ ಆರೋಪಿ, ನನ್ನ, ಚಾಸಾ-1 ಮತ್ತು ಇನ್ನು 11 ಜನರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಳು ಎಂದರೆ ಸರಿ. 3 ಮತ್ತು 4ನೇ ಆರೋಪಿತರು ಮನೆಯಲ್ಲಿ ಇದ್ದಾಗ, ನಾನು, ಚಾಸಾ-1 ಮತ್ತು ಇನ್ನುಳಿದ 11 ಜನರು ಸೇರಿ ಅವರ ಮನೆಗೆ ಹೋಗಿ, ಅವರನ್ನು ಮನೆಯಿಂದ ಹೊರಗೆ ಹಾಕಿ ಅವರ ಮನೆಯಲ್ಲಿ ಇದ್ದಂತಹ ಬಂಗಾರವನ್ನು ತೆಗೆದುಕೊಂಡು ಹೋಗಿದ್ದೇವೆ ಎಂದು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ರೀತಿ ನಾವು ಮಾಡಿಲ್ಲ ಎಂದು ಹೇಳುತ್ತಾರೆ. ಇದಾದ ನಂತರ ಮತ್ತೆ ನಾವು 3 ಮತ್ತು 4ನೇ ಆರೋಪಿತರನ್ನು ಮನೆಯಿಂದ ಹೊರಗೆ ಹಾಕಲು ಪ್ರಯತ್ನಪಟ್ಟಿದ್ದು, ಆ ಬಗ್ಗೆ ಇನ್ನೊಂದು ಪ್ರಕರಣ ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ ಕೇಸು ಜಮಖಂಡಿ ನಗರ ಠಾಣೆ ಕ್ರೈಂ ನಂ.14/2023 ರಂತೆ ದಾಖಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ರೀತಿ ನಾವು ಮಾಡಿಲ್ಲ ಎಂದು ಹೇಳುತ್ತಾರೆ. 2 ಮತ್ತು 3ನೇ ಆರೋಪಿತರನ್ನು ಮನೆಯಿಂದ ಹೊರಗೆ ಹಾಕುವ ಉದ್ದೇಶದಿಂದ ಚಾಸಾ-1 ಸುಳ್ಳು ಪ್ರಥಮ

ವರ್ತಮಾನ ಹೇಳಿಕೆ ನೀಡಿದ್ದಾಳೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವ ಸಮಯದಲ್ಲಿ ನಾನು ಹಾಜರಿರಲಿಲ್ಲ. ಪೋಲಿಸರು ಹೇಳಿದ ಹಾಗೆ ನಾನು ನಿಪಿ-1ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ನೇ ಆರೋಪಿ ಪರ ವಕೀಲರಿಂದಃ**-**</u>

ನಾನು ಒಕ್ಕಲುತನ ಮಾಡುತ್ತೇನೆ. ಘಟನೆ ನಡೆದಿದೆ ಎಂದು ಹೇಳಲಾದ ಸಮಯದಲ್ಲಿ ನಾನು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನನಗೂ, 3 ಮತ್ತು 4ನೇ ಆರೋಪಿತರಿಗೂ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿ. ಸುಮಾರು 10-15 ವರ್ಷಗಳಿಂದ ಅವರೊಂದಿಗೆ ಸಂಬಂಧ ಚೆನ್ನಾಗಿಲ್ಲ. ಅಪರಿಚಿತ ವ್ಯಕ್ತಿ 4ನೇ ಆರೋಪಿಯೊಂದಿಗೆ ಬಂದು ಹೋಗಿ ಮಾಡುತ್ತಿದ್ದುದರಿಂದ ನಾವು ಕೇಳಿದ್ದಕ್ಕೆ ಮನಸ್ತಾಪ ಇದೆ. 1ನೇ ಆರೋಪಿ ಸುಮಾರು 10-15 ವರ್ಷಗಳಿಂದ 3 ಮತ್ತು 4ನೇ ಆರೋಪಿತರೊಂದಿಗೆ ವಾಸವಾಗಿದ್ದಕ್ಕೆ ಯಾವುದೇ ಪ್ರಕರಣವನ್ನು ನಾವು ದಾಖಲಿಸಿಲ್ಲ. 4ನೇ ಆರೋಪಿ 10-15 ವರ್ಷಗಳಿಂದ 1ನೇ ಆರೋಪಿಯೊಂದಿಗೆ ವಾಸವಾಗಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಬಂಧ ಸರಿ ಇಲ್ಲದ್ದರಿಂದ ನಾವು ಅವರ ಮೇಲೆ, ಅವರು ನಮ್ಮ ಮೇಲೆ ಪ್ರಕರಣಗಳನ್ನು ದಾಖಲಿಸುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ. ನನ್ನ, ಚಾಸಾ-1 ಮತ್ತು ಇನ್ನುಳಿದ 11 ಜನರ ವಿರುದ್ಧ ಜಮಖಂಡಿ ಗ್ರಾಮೀಣ ಠಾಣೆ ಕ್ರೈ ನಂ.38/2023 ರಲ್ಲಿ ಕೇಸು ದಾಖಲಾಗಿದೆ ಎಂದರೆ ಸರಿ. 3 ಮತ್ತು 4ನೇ ಆರೋಪಿತರು ತಮಗೆ ಬಂದ ಜಮೀನಿನಲ್ಲಿ 2 ಗುಂಟೆ ಜಮೀನನ್ನು 1ನೇ ಆರೋಪಿಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ಗೊತ್ತಾದ ನಂತರ ನಾನು ಮತ್ತು ಚಾಸಾ-1 ತಕರಾರು ಮಾಡಿದ್ದೆವು ಎಂದರೆ ಸರಿಯಲ್ಲ. ಸದರಿಯವರ ಮಧ್ಯ 20 ಲಕ್ಷಕ್ಕೆ ವ್ಯವಹಾರ ಆಗಿ, 4ನೇ ಆರೋಪಿ 18 ಲಕ್ಷ ಹಣ ಮುಂಗಡವಾಗಿ ಪಡೆದಿದ್ದಳು ಎಂದರೆ ಸರಿಯಲ್ಲ. 4ನೇ ಆರೋಪಿ ಪೋಡಿ ಮಾಡಲು ಅರ್ಜಿ ಕೊಟ್ಟಾಗ ಅದಕ್ಕೆ ನಾವು ತಕರಾರು ಮಾಡಿದ್ದೆವು ಎಂದರೆ ಸರಿಯಲ್ಲ.

ಮಾರಾಟದ ವಿಷಯ ಗೊತ್ತಾದ ನಂತರ ನಾವು ಆರೋಪಿತರಿಗೆ ಕೊಲೆ ಮಾಡುವ ಉದ್ದೇಶದಿಂದ ಹೊಡೆ ಬಡೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದ ಜಮಖಂಡಿ ನಗರ ಠಾಣೆ ಕ್ರೈ ನಂ.13/2023 ರಲ್ಲಿ ನನ್ನ, ಅಶೋಕ ತೇಲಿ ಮತ್ತು ಭೀಮಪ್ಪ ತೇಲಿ ವಿರುದ್ಧ ಕೇಸು ದಾಖಲಾಗಿದೆ ಎಂದರೆ ಸರಿ. 1ನೇ ಆರೋಪಿ ಜಮೀನನ್ನು ಕ್ರಯಕ್ಕೆ ತೆಗೆದುಕೊಳ್ಳುತ್ತಾನೆ ಎಂಬ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ಕೇಸನ್ನು ದಾಖಲಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಜಮೀನನ್ನು ತೆಗೆದುಕೊಳ್ಳುತ್ತಾನೆ ಎಂಬ ಉದ್ದೇಶದಿಂದ 1 ಮತ್ತು 4ನೇ ಆರೋಪಿತರ ಮಧ್ಯ

ಸುಳ್ಳು ಸಂಬಂಧ ಸೃಷ್ಟಿ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 02-10-2022 ರಂದು 1ನೇ ಆರೋಪಿ ಚಾಸಾ-1 ರವರನ್ನು ಹಿಂದಿನಿಂದ ಬಂದು ಹಿಡಿದುಕೊಂಡು ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿದಾಕ್ಷಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹ 1ನೇ ಆರೋಪಿ ಜಮೀನನ್ನು ತೆಗೆದುಕೊಳ್ಳುತ್ತಾನೆ ಎಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎ ಂದರೆ ಸರಿಯಲ್ಲ.

<u>ಪಾಟೀ ಸವಾಲು: **2** ನೇ ಆರೋಪಿ ಪರ ವಕೀಲರಿಂದ:-</u>

1ನೇ ಆರೋಪಿ ನಮ್ಮ ಕುಟುಂಬಕ್ಕೆ ಸಂಬಂಧಪಟ್ಟಿಲ್ಲ ಎಂದರೆಸರಿ. 2ನೇ ಆರೋಪಿ ಆಸ್ತಿಗೆ ಸಂಬಂಧಪಟ್ಟಂತೆ ಬುದ್ದಿವಾದ ಹೇಳಲು ಬಂದಿದ್ದರಿಂದ ಅವರ ಮೇಲೆ ಸಿಟ್ಟಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಾುಲ್ಲ. ನಾನು ಹೇಳಿದಂತಹ ಘಟನೆಗೂ 2ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

2ನೇ ಆರೋಪಿ ಪರ ವಕೀಲರು, 1, 3 ಮತ್ತು 4ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

<u>ಮರುವಿಚಾರಣೆ  ಇಲ್ಲ**.**</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.

| | |
|---|---|
| ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ. | |
| ಸಿ.ಸಿ.ನಂ.**9/2023** | |
| ಚಾಸಾ-**6** | |
| ಪ್ರಾಸಾ-**3** | |
| ಸಾಕ್ಷಿದಾರರ ಹೆಸರು | ಅನಿಲ ಕೊಳ್ಳನ್ನವರ |
| ತಂದೆ/ಗಂಡ/ತಾಯಿ ಹೆಸರು | ಮಲ್ಲಪ್ಪ |
| ವಯಸ್ಸು | **23** ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮದರಖಂಡಿ |

ಸಾಕ್ಷಿಯನ್ನು ದಿನಾಂಕಃ**-25-02-2025**ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-

ಚಾಸಾ-1 ತಾಯಿ, ಚಾಸಾ-4 ನಮ್ಮ ದೊಡ್ಡಪ್ಪನ ಮಗ. ಚಾಸಾ-5 ತಂದೆ. ಚಾಸಾ-7 ಮತ್ತು ಚಾಸಾ-8 ಸಹೋದರರು. 3ನೇ ಆರೋಪಿ ದೊಡ್ಡಪ್ಪನ ಮಗ. 4ನೇ ಆರೋಪಿ ನಮ್ಮ ದೊಡ್ಡಪ್ಪನ ಹೆಂಡತಿ. 4ನೇ ಆರೋಪಿ ಮುಂಚೆ 4ನೇ ಕೆನಾಲ್ ಹಾರೋಗೇರಿಯಲ್ಲಿ ವಾಸವಾಗಿದ್ದಳು. 4ನೇ ಆರೋಪಿ ನಮ್ಮೂರಿಗೆ ಬಂದು ಹೋಗಿ ಮಾಡುತ್ತಿದ್ದಳು. 4ನೇ ಆರೋಪಿ ಬೇರೆ ಒಬ್ಬ ವ್ಯಕ್ತಿಯನ್ನು ಮದುವೆಯಾಗಿದ್ದೇನೆ ಎಂದು ಹೇಳಿ ಕರೆದುಕೊಂಡು ಬರುತ್ತಿದ್ದಳು. ನಮ್ಮ ದೊಡ್ಡಪ್ಪ ಮುಂಚೆಯೇ ಮೃತಪಟ್ಟಿದ್ದರು. 4ನೇ ಆರೋಪಿಯ ಮನೆಗೆ ಬೇರೆ ಒಬ್ಬ ವ್ಯಕ್ತಿ ಬರುತ್ತಿದ್ದ. 4ನೇ ಆರೋಪಿಗೆ ಬೇರೆ ಮನೆ ಇರಲಿಲ್ಲ. 4ನೇ ಆರೋಪಿಯ ಮನೆಗೆ 1ನೇ ಆರೋಪಿ ಬಂದು ಹೋಗುತ್ತಿದ್ದುದರಿಂದ ಜನ ಬೇರೆ ಮಾತನಾಡಲು ಪ್ರಾರಂಭಿಸಿದ್ದರು. ನಮಗೆ ಸರಿ ಅನಿಸದಿದ್ದುದರಿಂದ ಹಿರಿಯರನ್ನು ಕೂಡಿಸಿದ್ದೆವು. ಹಿರಿಯರು ಹೇಳಿದರೂ ಕೇಳದ್ದರಿಂದ 4ನೇ ಆರೋಪಿ ನಮ್ಮ ಮೇಲೆ ಸಿಟ್ಟಾಗಿದ್ದರು.

ದಿನಾಂಕ 02-10-2022 ರಂದು ನಾವು ಮನೆಯಲ್ಲಿಮಲಗಿಕೊಂಡಿದ್ದೆವು. ಚಾಸಾ-1 ಎಮ್ಮೆಗೆ ಮೇವು ಹಾಕಲು ಹೋಗಿದ್ದರು. ಆಗ ಹೊರಗಡೆ ಬಾಯಿ ಆಗುವ ಶಬ್ದ ಕೇಳಿ ಹೊರಗಡೆ ಬಂದಿದ್ದೇವೆ. ಆಗ 1 ರಿಂದ 4ನೇ ಆರೋಪಿತರು ಇದ್ದರು. ಎಲ್ಲರೂ ಸೇರಿ ಚಾಸಾ-1ರವರಿಗೆ ಹೊಡೆಯುತ್ತಿದ್ದರು ಮತ್ತು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು. 1ನೇ ಆರೋಪಿ ಚಾಸಾ-1 ರವರ ಸೀರೆಯನ್ನು ಹಿಡಿದು ಎಳೆದಾಡಿ ಹೊಡೆದಿದ್ದಾನೆ. ನಾವು ಮನೆಯಿಂದ ಹೊರಗಡೆ ಬಂದಾಗ ಆರೋಪಿತರು ಮತ್ತು ಚಾಸಾ-1 ರವರು ಬಾಯಿ ಮಾತಿನಲ್ಲಿ ಜಗಳ ಮಾಡುತ್ತಿದ್ದರು. 1ನೇ ಆರೋಪಿ ನಮ್ಮ ತಾಯಿಯ ಮೇಲೆ ಕೈ ಮಾಡುತ್ತಿದ್ದ ಅಂದರೆ ಬಡಿಯಲು ಬಂದಿದ್ದ. 1 ರಿಂದ 3ನೇ ಆರೋಪಿತರು ಬಂದು ಹಲ್ಲೆ ಮಾಡುತ್ತಿದ್ದರು. ಆಗ 1 ರಿಂದ 3ನೇ ಆರೋಪಿತರು ಮಾತ್ರ ಇದ್ದರು. ಸಾಕ್ಷಿ ಮುಂದುವರೆದು 4ನೇ ಆರೋಪಿ ಸಹ ಇದ್ದರು ಎಂದು ಹೇಳುತ್ತಾರೆ. ನಾವು ಸ್ಥಳಕ್ಕೆ

ಹೋಗಿ ಅವರನ್ನು ಬೈದು ಕಳಿಸಿದ್ದೇವೆ. ನಾನು, ಚಾಸಾ-5, ಚಾಸಾ-7 ಮತ್ತು ಚಾಸಾ-8 ರವರು ಗಲಾಟೆಯನ್ನು ಬಿಡಿಸಿದ್ದೇವೆ. ನಮ್ಮ ಮನೆಯವರೆಲ್ಲರೂ ಸೇರಿ ಪೋಲಿಸ್ ಠಾಣೆಗೆ ಪ್ರಥಮ ವರ್ತಮಾನ ಹೇಳಿಕೆ ಕೊಡಲು ಹೋಗಿದ್ದಾರೆ. ಸಾಕ್ಷಿ ಪುನಃ ಚಾಸಾ-1, ಚಾಸಾ-4 ಹೋಗಿದ್ದರು ಎಂದು ಹೇಳುತ್ತಾರೆ. ನ್ಯಾಯಲಯದ ಮುಂದಿರುವ ಆರೋಪಿತರೇ ಆ ದಿನ ಗಲಾಟೆ ಮಾಡಿದ್ದಾರೆ.

<u>ಪಾಟೀ ಸವಾಲುಃ **3** ಮತ್ತು **4**ನೇ ಆರೋಪಿತರ ಪರ ವಕೀಲರಿಂದಃ-</u>

ಚಾಸಾ-1 ಮೇವು ಹಾಕಲು ಹೋದಂತಹ ದನಗಳ ಶೆಡ್ ಪೂರ್ವ ದಿಕ್ಕಿನಲ್ಲಿ ಇದೆ. ನಾನು ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತೇನೆ. ನಾನು ಬೇರೆಯವರ ಜಮೀನಿನಲ್ಲಿ ಕೆಲಸ ಮಾಡುತ್ತೇನೆ. ಸಾಮಾನ್ಯವಾಗಿ ಕೂಲಿ ಕೆಲಸ ಮಾಡುವವರು ಬೆಳಿಗ್ಗೆ 5 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಮಾಡುತ್ತಾರೆ ಎಂದರೆ ಸರಿ. ಬೆಳಿಗ್ಗೆ 5 ಗಂಟೆಗೆ ಹೋದವರು ಮಧ್ಯಾಹ್ನ 2 ಗಂಟೆಗೆ ಬರುತ್ತಾರೆ ಎಂದರೆ ಸರಿ. ನಾನು ಕೂಲಿ ಕೆಲಸಕ್ಕೆ ಬೆಳಿಗ್ಗೆ 5 ಗಂಟೆಗೆ ಹೋಗಿ ಮಧ್ಯಾಹ್ನ 2 ಗಂಟೆಗೆ ಬರುತ್ತಿದ್ದೆ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿಗೆ 30 ಗುಂಟೆ ಜಮೀನು ಮತ್ತು 4ನೇ ಆರೋಪಿಗೆ 30 ಗುಂಟೆ ಜಮೀನು ಬಂದಿದೆ ಎಂದರೆ ಸರಿ. 4ನೇ ಆರೋಪಿ ಸರಕಾರದಿಂದ ಅನುದಾನ ಪಡೆದುಕೊಂಡು ತನಗೆ ಬಂದ 30 ಗುಂಟೆ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದಾಳೆ ಎಂದರೆ ಸರಿಯಲ್ಲ. 4ನೇ ಆರೋಪಿ ಮನೆ ಕಟ್ಟಿಕೊಂಡು 3ನೇ ಆರೋಪಿಯೊಂದಿಗೆ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಮುಂಚೆ ಇದ್ದರು ಎಂದು ಹೇಳುತ್ತಾರೆ. ಈಗಲೂ ಸಹ ಅದೇ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 02-10-2022 ರಂದು ಯಾವುದೇ ಆರೋಪಿತರು ನಮ್ಮ ತಾಯಿಗೆ ಬೈದಿಲ್ಲ ಅನ್ನುವುದು ಸರಿಯಲ್ಲ. ಚಾಸಾ-1 ರವರಿಗೆ ಆರೋಪಿತರು ಹೊಡೆ ಬಡೆ ಮಾಡಿದ್ದರಿಂದ ಚಾಸಾ-1ರವರಿಗೆ ಗಾಯಗಳಾಗಿದ್ದವು. ಚಾಸಾ-1ರವರಿಗೆ ಗಾಯಗಳಾಗಿದ್ದರಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡಿದ್ದಾರೆ. ಚಾಸಾ-1 ರವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡಿದ್ದಾರೆ. ನಾನು ಆಸ್ಪತ್ರೆಗೆ ಹೋಗಿರಲಿಲ್ಲ, ನನ್ನ ಸಹೋದರ ಹೋಗಿದ್ದ. ಚಾಸಾ-1 ರವರು 2-3 ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ತೆಗೆದುಕೊಂಡಿದ್ದಾರೆ. ಚಾಸಾ-1ರವರಿಗೆ ಒಳಪೆಟ್ಟು ಆಗಿದ್ದರಿಂದ ಚಿಕಿತ್ಸೆ ತೆಗೆದುಕೊಂಡಿದ್ದಾರೆ. ಚಾಸಾ-1 ರೊಂದಿಗೆ ಚಾಸಾ-4 ರವರು ಆಸ್ಪತ್ರೆಯಲ್ಲಿ ಇದ್ದರು. ಚಾಸಾ-1ರವರಿಗೆ, ಚಾಸಾ-2 ಮತ್ತು ಚಾಸಾ-3 ರವರು ಬೇಕಾದವರು ಎಂದರೆ ಸಾಕ್ಷಿ ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿದ್ದಾರೆ ಎಂದು ಹೇಳುತ್ತಾರೆ. ಚಾಸಾ-2 ರವರ ಮನೆ ಸಣ್ಣ ಕೆನಾಲ ಹತ್ತಿರ ಇದೆ ಎಂದರೆ ಸರಿಯಲ್ಲ. ದೊಡ್ಡ ಕೆನಾಲದಿಂದ ನಮ್ಮ ಮನೆಗೆ ಅರ್ಧ

ಕಿಲೋಮೀಟರ್ ಅಂತರ ಇದೆ ಎಂದರೆ ಸಾಕ್ಷಿ 400 ಮೀಟರ್ ಅಂತರ ಇದೆ ಎಂದು ಹೇಳುತ್ತಾರೆ. ಚಾಸಾ-1 ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದ ನಂತರ ಎಲ್ಲಿ ಪೆಟ್ಟಾಗಿತ್ತು ಎಂದು ನಾನು ವಿಚಾರಿಸಿಲ್ಲ. 4ನೇ ಆರೋಪಿ ಮನೆ ಕಟ್ಟಿಕೊಂಡು ವಾಸವಾಗಿದ್ದು, ಅದನ್ನು ಬಿಡಿಸುವ ಸಲುವಾಗಿ ಚಾಸಾ1 ಮತ್ತು ಚಾಸಾ-4 ರವರು ಸುಳ್ಳು ಪ್ರಕರಣ ಸೃಷ್ಟಿ ಮಾಡಿಕೊಂಡು, ಕೇಸನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಘಟನೆ ಸಮಯದಲ್ಲಿ ನಾನು ಇರಲಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರನ್ನು ಹೊಡೆದು ಬೈದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1**ನೇ ಆರೋಪಿ ಪರ ವಕೀಲರಿಂದಃ-</u>

ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ಜಮೀನಿನ ಕೇಸಿನ ಸಲುವಾಗಿ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಪೋಲಿಸ್ ಠಾಣೆಗೆ ಹೋಗಿಲ್ಲ. ಪೋಲಿಸರು ನನಗೆ ಯಾವುದೇ ನೋಟೀಸನ್ನು ಕೊಟ್ಟಿರಲಿಲ್ಲ. ನನಗೆ ಓದಲು ಬರುತ್ತದೆ. ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಅಜಿತ್ ಬರಡಗಿ ಯಾಕೆ ಬರುತ್ತಾರೆ ಅಂತಾ ಹೇಳಿ ನಾವು ಅವರ ಮೇಲೆ ಯಾವುದೇ ಪ್ರಕರಣ ದಾಖಲಿಸಿಲ್ಲ. 4ನೇ ಆರೋಪಿ 1ನೇ ಆರೋಪಿಯನ್ನು ಮದುವೆಯಾಗಿದ್ದಾಳೆ ಎಂದು ತೋರಿಸುವ ದಾಖಲಾತಿಗಳನ್ನು ಠಾಣೆಗೆ ಕೊಟ್ಟಿಲ್ಲ. ನನಗೆ ಏನೂ ಗೊತ್ತಿಲ್ಲದಿದ್ದರೂ ಸಹ ನನ್ನ ಸಹೋದರನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4, 3 ಮತ್ತು ಆರೋಪಿತರಿಗೂ ಸಂಬಂಧ ಸರಿ ಇಲ್ಲ ಎಂದರೆ ಸರಿ. ಸುಮಾರು ನಾಲ್ಕುವರೆ ವರ್ಷಗಳಿಂದ ಅವರ ನಡುವೆ ಸಂಬಂಧ ಸರಿ ಇಲ್ಲ. ಅದಕ್ಕಿಂತ ಮುಂಚೆ ಚಾಸಾ-4, 3 ಮತ್ತು 4ನೇ ಆರೋಪಿತರೊಂದಿಗೆ ವಾಸವಾಗಿದ್ದ ಎಂದರೆ ಸರಿ. ಸುಮಾರು ನಾಲ್ಕುವರೆ ವರ್ಷಗಳಿಂದ ಚಾಸಾ-4 ರವರು, 3 ಮತ್ತು 4ನೇ ಆರೋಪಿತರ ಮೇಲೆ ಮತ್ತು 3 ಮತ್ತು 4ನೇ ಆರೋಪಿತರು, ಚಾಸಾ-4 ರವರ ಮೇಲೆ ಕೇಸುಗಳನ್ನು ಹಾಕುತ್ತಾ ಬಂದಿದ್ದಾರೆ ಎಂದರೆ ಸರಿ. 4ನೇ ಆರೋಪಿ 1ನೇ ಆರೋಪಿಯನ್ನು ಕರೆದುಕೊಂಡು ಬಂದಿದ್ದರಿಂದ ಚಾಸಾ-4 ರವರಿಗೆ ಸರಿ ಹೊಂದದೇ ಇದ್ದುದರಿಂದ ಮನಸ್ತಾಪ ಬಂದಿದೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4ನೇ ಆರೋಪಿ 1ನೇ ಆರೋಪಿಗೆ ತನಗೆ ಬಂದ ಭಾಗದಲ್ಲಿ 2 ಗುಂಟೆ ಜಮೀನನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ 4ನೇ ಆರೋಪಿ 1ನೇ ಆರೋಪಿ ಕಡೆಯಿಂದ 18 ಲಕ್ಷ ಹಣ ಮುಂಗಡವಾಗಿ ಪಡೆದಿದ್ದಳು ಎಂದರೆ ಸರಿಯಲ್ಲ. ಸದರಿ ಖರೀದಿ ವ್ಯವಹಾರದ ಬಗ್ಗೆ ನಮಗೆ ಒಪ್ಪಿಗೆ ಇರಲಿಲ್ಲ

ತಕರಾರು ಇತ್ತು ಎಂದರೆ ಸರಿಯಲ್ಲ. 1ನೇ ಆರೋಪಿ 2 ಗುಂಟೆ ಜಮೀನನ್ನು ಕ್ರಯಕ್ಕೆ ತೆಗೆದುಕೊಳ್ಳುತ್ತಾನೆ ಎಂಬ ಉದ್ದೇಶದಿಂದ ನಾವೆಲ್ಲರೂ ಸಂಗನಮತ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 1ನೇ ಆರೋಪಿ ನಮ್ಮ ತಾಯಿಯ ಸೀರೆ ಹಿಡಿದು ಎಳೆದಾಡಿ ಉಳಿದ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ತಾಯಿ ಮತ್ತು ಸಹೋದರನ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 4ನೇ ಆರೋಪಿ ನಮ್ಮ ತಾಯಿ ಮತ್ತು ಚಾಸಾ-4 ರವರ ಮೇಲೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿ ಸಹ ಚಾಸಾ-4 ಮತ್ತು ಅಶೋಕ ತೇಲಿ, ಭರಮಪ್ಪ ತೇಲಿ ಇವರ ವಿರುದ್ಧ ಕೊಲೆ ಪ್ರಯತ್ನದ ಕೇಸು ದಾಖಲಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಸಹ ಚಾಸಾ-4 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇಹನೆ ಎಂದರೆ ಸರಿಯಲ್ಲ. 1ನೇ ಆರೋಪಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಕ್ರಯದ ವ್ಯವಹಾರವನ್ನು ರದ್ದು ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **2**ನೇ ಆರೋಪಿ ಪರ ವಕೀಲರಿಂದಃ-</u>

ನಾವು ಮತ್ತು 4ನೇ ಆರೋಪಿ ಒಂದೇ ಕುಟುಂಬದವರು ಎಂದರೆ ಸರಿಯಲ್ಲ. 4ನೇ ಆರೋಪಿ ನಮ್ಮ ದೊಡ್ಡಮ್ಮ ಎಂದರೆ ಸರಿ. ನಮಗೂ ಮತ್ತು 4ನೇ ಆರೋಪಿಗೂ ಈಗ ಮನಸ್ತಾಪ ಇದೆ ಎಂದರೆ ಸರಿ. ನಮಗೂ ಮತ್ತು 4ನೇ ಆರೋಪಿಗೂ ಆಸ್ತಿಯ ಸಲುವಾಗಿ ಮನಸ್ತಾಪ ಇದೆ ಎಂದರೆ ಸರಿಯಲ್ಲ. ಸದರಿ ಮನಸ್ತಾಪದ ಸಲುವಾಗಿ 2ನೇ ಆರೋಪಿ ಬುದ್ದಿವಾದ ಹೇಳಿದ್ದರಿಂದ ಅವರನ್ನೂ ಸಹ ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಮಾಡಿದ್ದೇವೆ ಎಂದರೆ ಸರಿಯಲ್ಲ. 2ನೇ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಅನ್ನುವುದು ಸರಿಯಲ್ಲ. 2ನೇ ಆರೋಪಿ ಚಾಸಾ-1 ರವರಿಗೆ ಹೊಡೆದು ಬೈದಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2ನೇ ಆರೋಪಿ ಪರ ವಕೀಲರು, 1, 3 ಮತ್ತು 4ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.